| |
|---|
| **Deposition Sheets (RP.No.57) Form No.4** |

**IN THE COURT OF 1st ADDL. CIVIL JUDGE & J.M.F.C.,**

**Criminal Case No.347/2012**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 1

ಸಾಕ್ಷಿದಾರರ ಹೆಸರು : ಗಂಗಮ್ಮ
ತಂದೆಯ ಹೆಸರು : ಶರಣಪ್ಪ
ಪ್ರಾಯ : 48 ವರ್ಷ
ಉದ್ಯೋಗ : ಮನೆಗೆಲಸ
ವಾಸ : ಗುಡ್ಡದದೇವಲಾಪೂರ

ದಿನಾಂಕ 22.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-2 ರಿಂದ 09 ರವರ ಪರಿಚಯವಿರುತ್ತದೆ. ಈ ದಿನ ನ್ಯಾಯಾಲದ ಮುಂದೆ ಹಾಜರಿರುವ ಆರೋಪಿತರ ಪರಿಚಯ ಇರುತ್ತದೆ.

ಸುಮಾರು 13 ವರ್ಷಗಳ ಹಿಂದೆ ನಾನು ನನ್ನ ಗಂಡನ ಜೊತೆ ಸಹಬಾಳ್ವೆ ಮಾಡಲು ಹೋಗಿದ್ದು ಸ್ವಲ್ಪ ದಿನಗಳ ಕಾಲ ಚೆನ್ನಾಗಿದ್ದು ನಂತರ ಆರೋಪಿಯು ನಾನು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಕೆಟ್ಟ ಅವ್ಯಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದನು. ಹೊಡೆ ಬಡೆ ಮಾಡಿ ನನ್ನನ್ನು ನನ್ನ ತವರು ಮನೆಗೆ ಹೋಗುವಂತೆ ಮಾಡಿರುತ್ತಾರೆ. ನಾನು ನನ್ನ ತವರು ಮನೆಯಲ್ಲಿ ವಾಸವಿದ್ದಾಗ ಆರೋಪಿತರು ಬಂದು ಇಲ್ಲಿ ಇದ್ದುಕೊಂಡು ನಮ್ಮ ಮನೆತನದ ಮಾನ ಮರ್ಯಾದೆ ಆಳುಮಾಡುತ್ತಿಯಾ ಎಂದು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆ ಬಡೆ ಮಾಡಿ ಹಲ್ಲೆ ಮಾಡಿ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ತಾಯಿ ಚಾಸಾ-4 ಮತ್ತು ಚಾಸಾ-5 ಮತ್ತು ಚಾಸಾ-6 ರವರು ಅಲ್ಲಿಗೆ ಬಂದು ಜಗಳ ಬಿಡಿಸಿರುತ್ತಾರೆ. ಈ ಕುರಿತು ನಾನು ಪೋಲಿಸ ಠಾಣೆಗೆ ಆರೋಪಿತರ ವಿರುದ್ದ ದೂರು ನೀಡಿರುತ್ತೇನೆ.

2. ಸಾಕ್ಷಿಯು ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ನಿಪಿ-3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>**

3. ಸದರಿ ಮೇಲೆ ತಿಳಿಸಿದ ದಿನಾಂಕದಂದು ನನ್ನ ಅತ್ತೆ ಮತ್ತು ನನ್ನ ಗಂಡ ನನ್ನ ಬೆನ್ನಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಾನು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿದ್ದು ನನ್ನ ಮತ್ತು ಪಂಚರರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು</u>** : ಆರೋಪಿತರ ಪರ : ಶ್ರೀ ಪಿ ಎನ್ ಜಿ ವಕೀಲರಿಂದಃ

4. ನನ್ನ ಅತ್ತೆ 2ನೇ ಆರೋಪಿ ಮರಣ ಹೊಂದಿ 12 ವರ್ಷಗಳ ಆಗಿರುತ್ತವೆ. ನನ್ನ ಅತ್ತೆ ಮರಣ ಹೊಂದುವ ಮೊದಲು ಮನೆಯಲ್ಲಿ ಇದ್ದು ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತವರು ಮನೆಯ ಪೂರ್ವ ದಿಕ್ಕಿಗೆ ಯಾರ ಮನೆ ಬರುತ್ತದೆ ನನಗೆ ಗೊತ್ತಿಲ್ಲ. ಅದೆ ರೀತಿ ಪಶ್ಚಿಮ ದಿಕ್ಕಿಗೆ ಯಾರ ಮನೆ ಬರುತ್ತದೆ ನನಗೆ ಗೊತ್ತಿಲ್ಲ. ನನ್ನ ತವರು ಮನೆಯ ಚೆಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ತವರು ಮನೆಯಲ್ಲಿ ಸಹೋದರಿ ಸಹೋದರ ಸೇರಿ ಒಟ್ಟು 5 ಜನರು ಇರುತ್ತೆವೆ. ಅದೆ ರೀತಿ ನನ್ನ ತಾಯಿ ಮತ್ತು ನನ್ನ ತಂದೆ ಒಂದೆ ಮನೆಯಲ್ಲಿ ವಾಸವಾಗಿದ್ದೆವು. ನನ್ನ ಮತ್ತು ನನ್ನ ಗಂಡನ ನಡುವೆ ಆದಂತಹ ಜಗಳದ ಸಮಯದಲ್ಲಿ ನನ್ನ ಹಿರಿಯ ಮಗನಿಗೆ 12 ವರ್ಷ ವಯಸ್ಸು ಆಗಿದ್ದು ನನ್ನ ಜೊತೆಯಲ್ಲಿಯೆ ವಾಸವಾಗಿದ್ದನು. ಉಳಿದ ಹೆಣ್ಣು ಮಕ್ಕಳಿಗೆ 4 ವರ್ಷ ವಯಸ್ಸು ಆಗಿತ್ತು. ಆರೋಪಿತರು ಹಲ್ಲೆ ಮಾಡಲು  ನನ್ನ ತವರು ಮನೆಯ ಒಳಗಡೆ ಬಂದಿದ್ದರು. ಗಲಾಟೆಯ ಸಮಯದಲ್ಲಿ ನನ್ನ ಕೈ ಬಳೆಗಳು ಹೊಡೆದಿದ್ದವು. ಬಳೆಚೂರುಗಳು ನೆಲದ ಮೇಲೆ ಬಿದ್ದಿದ್ದವು. ಗಲಾಟೆಯಲ್ಲಿ ನನ್ನ ಕೈಗೆ ರಕ್ತ ಬಂದಿದ್ದು ಮತ್ತು ಬಾವು ಬಂದಿರುತ್ತದೆ. ರಕ್ತವು ನೆಲಕ್ಕೆ ಚೆಲ್ಲಿರಲಿಲ್ಲ. ಅದೆ ರೀತಿ ನನ್ನ ಬೆನ್ನಿಗೂ ಕೂಡ ರಕ್ತಗಾಯವಾಗಿತ್ತು. ಚೀಕಿತ್ಸೆಯನ್ನು ಹನಮನಾಳ ಸರಕಾರಿ ಆಸ್ಪತ್ರೆಯಲ್ಲಿ ಪಡೆದುಕೊಂಡು ನಂತರ ಹೆಚ್ಚಿನ ಚೀಕಿತ್ಸೆಗಾಗಿ ಕುಷ್ಟಗಿ ಸರಕಾರಿ ಆಸ್ಪತ್ರೆಯಲ್ಲಿ ಚೀಕಿತ್ಸೆ ಪಡೆದುಕೊಂಡಿರುತ್ತೆನೆ. ಹನಮನಾಳ

ಆಸ್ಪತ್ರೆಯಲ್ಲಿ 5 ದಿನಗಳ ಕಾಲ ಒಳರೋಗಿಯಾಗಿದ್ದೆ. ನಂತರ ಕುಷ್ಟಗಿ ಆಸ್ಪತ್ರೆಯಲ್ಲಿ ಐದು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಬಳೆಚೂರು ಹೊಡೆದಿರುವ ಮತ್ತು ಎರಡು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಕುರಿತು ಪೋಲಿಸರಿಗೆ ತಿಳಿಸಿರುತ್ತೇನೆ. 2012 ನೇ ಸಾಲಿನ ಗಲಾಟೆ ಸಮಯದಲ್ಲಿ ನಾನು ಹನಮಸಾಗರದ ಕಸ್ತೂರುಬಾ ಶಾಲೆಯಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಹನಮಸಾಗರದಲ್ಲಿ ವಾಸವಾಗಿದ್ದೆ. ಸದ್ಯ ನಾನು ಬೆಂಗಳೂರಿನಲ್ಲಿ ಖಾಸಗಿ ಹಾಸ್ಟೆಲ್ ನಲ್ಲಿ ಅಡುಗೆ ಸಹಾಯಕಿ ಕೆಲಸ ಮಾಡುತ್ತಿದ್ದೇನೆ. ನನ್ನ ಹಿರಿಯ ಮಗನ ಮದುವೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರೇಮ ವಿವಾಹವಾಗಿರುತ್ತಾನೆ ಎಂದು ನುಡಿಯುತ್ತಾರೆ. ಘಟನೆಯ ನಂತರ ಪಿರ್ಯಾದಿಯನ್ನು ನೀಡಲು 5 ರಿಂದ 6 ದಿನಗಳ ನಂತರ ವಿಚಾರಿಸಿ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಪಿರ್ಯಾದಿಯನ್ನು ಠಾಣೆಯವರು ನನ್ನ ಹೇಳಿಕೆಯಂತೆ ಬರೆದುಕೊಂಡಿರುತ್ತಾರೆ. ಪಿರ್ಯಾದಿಯನ್ನು ಪೋಲಿಸರು ಬರೆದುಕೊಂಡಿರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಪಿರ್ಯಾದಿಯಲ್ಲಿ ನನಗೆ ಅನ್ಯಾಯವಾಗಿರುವ ವಿಷಯವನ್ನು ಹೇಳಿದ್ದು ಅದರಂತೆ ಪೋಲಿಸರು ಬರೆದುಕೊಂಡಿರುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. 1 ನೇ ಆರೋಪಿಯು ನನ್ನ ತಾಯಿಯ ತಮ್ಮನಾಗಬೇಕು. ಆರೋಪಿತರು ನನಗೆ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ ಮತ್ತು ಜೀವ ಬೆದರಿಕೆ ಹಾಕಿರುವುದಿಲ್ಲ ಹಾಗೂ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದಂತೆ ಆರೋಪಿತರು ಯಾವುದೆ ಅಪರಾಧ ಮಾಡದೆ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಯಾವುದೆ ರೀತಿ ವಾಸ ಮಾಡದೆ ಇದ್ದರೂ ಆರೋಪಿತರಿಗೆ ಕಿರುಕುಳ ಕೊಡುವುದಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-22.09.2025

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ